# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 1333 |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ ಕೇಶವ ಪ್ರಸಾದ್ .ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ** | : | 16.03.2026 |
| **ಉತ್ತರಿಸಬೇಕಾದ ಸಚಿವರು** | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. |

| ಪ್ರಶ್ನೆ .ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಮತ್ತು ಆಸ್ಪತ್ರೆಗಳಲ್ಲಿ ಸಿ.ಟಿ.ಸ್ಕ್ಯಾನ್ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಸರ್ಕಾರ ಕೈಗೊಂಡ ಕ್ರಮಗಳು ಯಾವುವು; (ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಎಂ.ಆರ್.ಐ (MRI) ಮತ್ತು ಸಿ.ಟಿ. ಸ್ಕ್ಯಾನ್ (CT Scan) ಸೌಲಭ್ಯಗಳನ್ನು PPP ಮಾದರಿಯಲ್ಲಿ 2019-2020 ನೇ ಸಾಲಿನಿಂದ ಮೂರು ಸೇವದಾರರಿಂದ ರಾಜ್ಯದ ವಿವಿಧ ಜಿಲ್ಲಾ ಆಸ್ಪತ್ರೆಗಳಲ್ಲಿ ಒಟ್ಟು 15 ಸಿ.ಟಿ. ಸ್ಕ್ಯಾನ್ (CT Scan) ಕೇಂದ್ರಗಳು ಹಾಗೂ 06 ಎಂ.ಆರ್.ಐ (MRI) ಕೇಂದ್ರಗಳು ಸೇವೆಗಳನ್ನು ಒದಗಿಸಲಾಗುತ್ತಿದೆ.<br>PPP ಸೇವಾದಾರರಲ್ಲಿ ಒಬ್ಬರಾದ M/s KRSNAA DIAGNOSTICS ರವರು ದಿನಾಂಕ:18.02.2026 ರಿಂದ ಸೇವೆಗಳನ್ನು ಸ್ಥಗಿತಗೊಳಿಸಿದರೂ ಸಹ, ಎಲ್ಲಾ ತುರ್ತು ಎಂ.ಆರ್.ಐ (MRI) ಮತ್ತು ಸಿ.ಟಿ. ಸ್ಕ್ಯಾನ್ (CT Scan) ಸೇವೆಗಳನ್ನು ನಿರಂತವಾಗಿ ಸದರಿ ಜಿಲ್ಲಾ ಆಸ್ಪತ್ರೆಗಳಲ್ಲಿಯೇ ಒದಗಿಸಲಾಗುತ್ತಿದೆ.<br>ತುರ್ತು ಇಲ್ಲದೆ ಇರುವ ರೋಗಿಗಳಿಗೆ ನಿರಂತರವಾಗಿ ಎಂ.ಆರ್.ಐ (MRI) ಮತ್ತು ಸಿ.ಟಿ. ಸ್ಕ್ಯಾನ್ (CT Scan) ಸೌಲಭ್ಯಗಳನ್ನು ನೀಡಲು ಜಿಲ್ಲಾ ಆಸ್ಪತ್ರೆಗಳೊಂದಿಗೆ ಸದರಿ ಜಿಲ್ಲೆಗಳಲ್ಲಿಯ SAST Empanelled ವೈದ್ಯಕೀಯ ಸಂಸ್ಥೆಗಳು/ ಖಾಸಗಿ ಆಸ್ಪತ್ರೆಗಳನ್ನು ಗುರುತಿಸಿ ಸೇವೆಗಳನ್ನು ನೀಡಲಾಗುತ್ತಿದೆ. |
| ಆ) | ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಸಿ.ಟಿ. ಸ್ಕ್ಯಾನ್ ಮತ್ತು ಎಂ.ಆರ್.ಐ ಸೇವೆಗಳನ್ನು ನೀಡಲು ಯಾವ ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ; ಅವರಿಗೆ ನೀಡಬೇಕಾಗಿರುವ ಬಾಕಿ ಮೊತ್ತ ಎಷ್ಟು; ಯಾವ ಕಾರಣಕ್ಕೆ ಬಾಕಿ ಉಳಿಸಿಕೊಳ್ಳಲಾಗಿದೆ; ಸಕಾಲದಲ್ಲಿ ಪಾವತಿಸಲು ನಿರ್ಲಕ್ಷ್ಯ ಮಾಡಿದವರು ಯಾರು; ನಿರ್ಲಕ್ಷ್ಯ ಮಾಡಿದವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳು ಯಾವುವು; ಸಂಪೂರ್ಣ ಮಾಹಿತಿ ನೀಡುವುದು; | ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಸಿ.ಟಿ. ಸ್ಕ್ಯಾನ್ ಮತ್ತು ಎಂ.ಆರ್.ಐ ಸೇವೆಗಳನ್ನು PPP ಮಾದರಿಯಲ್ಲಿ ಒದಗಿಸಲು ಕೆಳಕಂಡ ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗಿದೆ:<br>1. M/S Krsnaa Diagnostics: 13 CT and 05 MRI Centres.<br>2. M/S K.V Hanchinal Pvt. Ltd: 01 CT and 01 MRI Centre.<br>3. M/S Dhanalaxmi Dresses:01 CT Centre.<br>ಈ ಸೌಲಭ್ಯಗಳನ್ನು ಒದಗಿಸುತ್ತಿರುವ ಖಾಸಗಿ ಸೇವಾ ಸಂಸ್ಥೆಗಳಿಗೆ 2019 2020 ಸಾಲಿನಿಂದ (Service Providers) ಬಾಕಿಯಿರುವ ಬಿಲ್ಲಿನ ಅಂದಾಜು ಮೊತ್ತ ಕೆಳಕಂಡಂತಿವೆ:<br>1.M/S KrsnaaDiagnostics:-ರೂ.23,09,95,260/<br>2.M/S K.V Hanchinal Pvt. Ltd-ರೂ.6,29,25,800/ 2021<br>3.M/S Dhalaxmi Dresses-ರೂ.1,97,56,125/<br>ಇದಲ್ಲದೆ 5% ವಾರ್ಷಿಕ ಹೆಚ್ಚಳ ನೀಡದ ಇರುವ ಅಂದಾಜು ಮೊತ್ತ ಈ ಕೆಳಕಂಡಂತ್ತಿದೆ:-<br>1.M/S KrsnaaDiagnostics: ರೂ.4743.60/- ಲಕ್ಷಗಳು (Nov 2024 ರವರೆಗೆ )<br>2.M/S K.V Hanchinal Pvt.Ltd ರೂ.449.97/ ಲಕ್ಷಗಳು (Sep 2024 ರವರೆಗೆ)<br>3.M/S Dhalaxmi Dresses ರೂ.32.70/-ಲಕ್ಷಗಳು (Oct 2024 ರ ವರೆಗೆ) |

| | | |
|---|---|---|
| | | ಪ್ರಸ್ತುತ PPP ಮಾದರಿಯಲ್ಲಿ ರೋಗಿಗಳಿಗೆ ಅನಗತ್ಯ ಸ್ಕ್ಯಾನ್‌ಗಳನ್ನು/ ಒಂದೇ ರೋಗಿಗೆ ಒಂದೆ ದಿವಸ ಒಂದಕ್ಕಿಂತ ಹೆಚ್ಚು ಸ್ಕ್ಯಾನ್‌ಗಳನ್ನು ಮಾಡಿ ರೋಗಿಗಳನ್ನು ಅನಗತ್ಯ ವಿಕಿರಣಕ್ಕೆ/ಕ್ಷ ಕಿರಣಕ್ಕೆ ಒಡ್ಡುತ್ತಿರುವುದರಿಂದ ರೋಗಿಗಳ ಜೀವಕ್ಕೆ ಅಪಾಯಕಾರಿಯಾಗಿರುವುದನ್ನು ಗಮನಿಸಲಾಗಿ, ಇದರಿಂದ ದುಷ್ಪರಿಣಾಮಗಳು ಉಂಟಾಗುವ ಸಂಭವವಿರುತ್ತದೆ. ಹಾಗೂ Contrast Scanಗಳಿಗೆ ಶಿಫಾರಸ್ಸು ಮಾಡುವ ಮುನ್ನ ಅಗತ್ಯ ಪ್ರಯೋಗಾಲಯ ಪರೀಕ್ಷೆಗಳನ್ನು ಮಾಡಿಸದೇ ಇರುವುದು ಮುಂತಾದ ನ್ಯೂನ್ಯತೆಗಳನ್ನು ಗಮನಿಸಿ. ನ್ಯೂನ್ಯತೆಗಳ ಹಿನ್ನಲೆಯಲ್ಲಿ ಮತ್ತು ಅನಗತ್ಯ ಸ್ಕ್ಯಾನ್‌ಗಳನ್ನು ತಪ್ಪಿಸಲು ಹಾಗೂ ಸರ್ಕಾರದ ಅನುದಾನವನ್ನು ಸಮರ್ಪಕವಾಗಿ ಬಳಕೆಮಾಡಲು ಸದರಿ ಸಂಸ್ಥೆಗಳಿಗೆ ಹಣಪಾವತಿಯನ್ನು ಬಾಕಿ ಉಳಿಸಿಕೊಳ್ಳಲಾಗಿದೆ. ಇದರಲ್ಲಿ ಯಾವುದೇ ಅಧಿಕಾರಿಯ ನಿರ್ಲಕ್ಷ್ಯ ಇರುವುದಿಲ್ಲ. |
| ಇ) | ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಸಿಗಬೇಕಿದ್ದ ಸೇವೆಗೆ ಬಡವರು ಇಂದು ಖಾಸಗಿ ಕೇಂದ್ರಗಳಲ್ಲಿ ರೂ.2.181 (ಸಿ.ಟಿ.ಸ್ಕ್ಯಾನ್) ಮತ್ತು ರೂ.4,221 (ಎಂ.ಆರ್.ಐ) ಪಾವತಿಸಬೇಕಾದ ಪರಿಸ್ಥಿತಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಅವರಿಗೆ ಹಣವನ್ನು ಮರುಪಾವತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳಾವುವು (ಸಂಪೂರ್ಣ ಮಾಹಿತಿ ನೀಡುವುದು) | ಆದೇಶ ಸಂಖ್ಯೆ: ಆಕುಕ 243 ಎಫ್‌ಪಿಆರ್ 2024, ಬೆಂಗಳೂರು, ದಿನಾಂಕ: 29/01/2025 ರಂತೆ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಪಿಪಿಪಿ ಮಾದರಿಯಲ್ಲಿ ಒದಗಿಸಲಾಗುತ್ತಿರುವ CT Scan ಮತ್ತು MRI Scan ಸೇವೆಗಳಿಗೆ PHH ಕಾರ್ಡ್ ಹೊಂದಿರುವ ರೋಗಿಗಳಿಗೆ ಸಂಪೂರ್ಣ ಉಚಿತವಾಗಿ ಹಾಗೂ ಇತರರಿಗೆ ಶೇ.70% ರಷ್ಟು ಶುಲ್ಕ ವಿಧಿಸಿ CT Scan ಮತ್ತು MRI Scan ಸೇವೆಗಳನ್ನು ನೀಡಲಾಗುತ್ತಿದೆ.<br>PPP ಸೇವದಾರರಲ್ಲಿ ಒಬ್ಬರಾದ M/s KRSNAA DIAGNOSTICS ರವರು ದಿನಾಂಕ:18.02.2026 ರಿಂದ ಸೇವೆಗಳನ್ನು ಸ್ಥಗಿತಗೊಳಿಸಿದ್ದರು ಸಹ, ಎಲ್ಲಾ, ತುರ್ತು ಎಂ.ಆರ್.ಐ (MRI) ಮತ್ತುಸಿ.ಟಿ. ಸ್ಕ್ಯಾನ್ (CT Scan) ಸೇವೆಗಳನ್ನು ನಿರಂತವಾಗಿ ಸದರಿ ಜಿಲ್ಲಾ ಆಸ್ಪತ್ರೆಗಳಲ್ಲಿಯೆ ಒದಗಿಸಲಾಗುತ್ತಿದೆ.<br>ತುರ್ತು ಇಲ್ಲದೆ ಇರುವ ರೋಗಿಗಳಿಗೆ ನಿರಂತರವಾಗಿ ಎಂ.ಆರ್.ಐ (MRI) ಮತ್ತು ಸಿ.ಟಿ. ಸ್ಕ್ಯಾನ್ (CT Scan) ಸೌಲಭ್ಯಗಳನ್ನು ನೀಡಲು ಜಿಲ್ಲಾ ಆಸ್ಪತ್ರೆಗಳೊಂದಿಗೆ ಸದರಿ ಜಿಲ್ಲೆಗಳಲ್ಲಿಯ SAST Empanelled ವೈದ್ಯಕೀಯ ಸಂಸ್ಥೆಗಳು/ ಖಾಸಗಿ ಆಸ್ಪತ್ರೆಗಳನ್ನು ಗುರುತಿಸಿ ಸೇವೆಗಳನ್ನು ನೀಡಲಾಗುತ್ತಿದೆ.<br>SAST ಮೂಲಕ December-2024 ರಿಂದ CT ಮತ್ತು MRI ಸ್ಕ್ಯಾನ್ ಸೇವೆಗಳನ್ನು ನೀಡಲಾಗುತ್ತಿದೆ ಹಾಗೂ ಮುಂದಿನ ದಿನಗಳಲ್ಲಿ ಉಳಿದ ಜಿಲ್ಲೆಗಳಲ್ಲಿ in House ಮಾದರಿಯಲ್ಲಿ CT ಮತ್ತು MRI ಸ್ಕ್ಯಾನ್ ಸೇವೆಗಳನ್ನು ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಈಗಾಗಲೇ ಕೆಲವು ಜಿಲ್ಲಾ ಆಸ್ಪತ್ರೆಗಳಿಗೆ CT ಮತ್ತು MRI ಸ್ಕ್ಯಾನ್ ಯಂತ್ರಗಳ ಖರೀದಿಗೆ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. |
| ಈ) | ಆರೋಗ್ಯ ಸೇವೆ ಎನ್ನುವುದು ನಾಗರಿಕರ ಮೂಲಭೂತಹಕ್ಕು, ಆದ್ದರಿಂದ ಬಡರೋಗಿಗಳಿಗೆ ಸಿ.ಟಿ. ಸ್ಕ್ಯಾನ್ ಮತ್ತು ಎಂ.ಆರ್.ಐ ಸೇವೆಗಳ ಪರ್ಯಾಯ ವ್ಯವಸ್ಥೆ ಕಲ್ಪಿಸಿದೆಯೇ; ಸಂಪೂರ್ಣ ಮಾಹಿತಿ ನೀಡುವುದು | ಬಡ ರೋಗಿಗಳಿಗೆ ಸಿ.ಟಿ. ಸ್ಕ್ಯಾನ್ ಮತ್ತು ಎಂ.ಆರ್.ಐ ಸೇವೆಗಳನ್ನು ನಿರಂತರವಾಗಿ ನೀಡಲು ಕೈಗೊಂಡಿರುವ ಪರ್ಯಾಯ ವ್ಯವಸ್ಥೆಗಳ ವಿವರ:-<br>PPP ಸೇವದಾರರಲ್ಲಿ ಒಬ್ಬರಾದ M/s KRSNAA DIAGNOSTICS ರವರು ದಿನಾಂಕ:18.02.2026 ರಿಂದ ಸೇವೆಗಳನ್ನು ಸ್ಥಗಿತಗೊಳಿಸಿದರು ಸಹ, ಎಲ್ಲಾ, ತುರ್ತು ಎಂ.ಆರ್.ಐ (MRI) ಮತ್ತು ಸಿ.ಟಿ. ಸ್ಕ್ಯಾನ್ (CT Scan) ಸೇವೆಗಳನ್ನು ನಿರಂತವಾಗಿ ಸದರಿ ಜಿಲ್ಲಾ ಆಸ್ಪತ್ರೆಗಳಲ್ಲಿಯೆ ಒದಗಿಸಲಾಗುತ್ತಿದೆ. |

| | | |
|---|---|---|
| | | ತುರ್ತು ಇಲ್ಲದೆ ಇರುವ ರೋಗಿಗಳಿಗೆ ನಿರಂತರವಾಗಿ ಎಂ.ಆರ್.ಐ (MRI) ಮತ್ತು ಸಿ.ಟಿ. ಸ್ಕ್ಯಾನ್ (CT Scan) ಸೌಲಭ್ಯಗಳನ್ನು ನೀಡಲು ಜಿಲ್ಲಾ ಆಸ್ಪತ್ರೆಗಳೊಂದಿಗೆ ಸದರಿ ಜಿಲ್ಲೆಗಳಲ್ಲಿಯ SAST Empanelled ವೈದ್ಯಕೀಯ ಸಂಸ್ಥೆಗಳು/ ಖಾಸಗಿ ಆಸ್ಪತ್ರೆಗಳನ್ನು ಗುರುತಿಸಿ ಸೇವೆಗಳನ್ನು ನೀಡಲಾಗುತ್ತಿದೆ.<br><br>ಮುಂದಿನ ದಿನಗಳಲ್ಲಿ ಉಳಿದ ಜಿಲ್ಲೆಗಳಲ್ಲಿ In-House ಮಾದರಿಯಲ್ಲಿ CT ಮತ್ತು MRI ಸ್ಕ್ಯಾನ್ ಸೇವೆಗಳನ್ನು ಅನುಷ್ಠಾನಗೊಳಿಸಲು ಕ್ರಮಹಿಸಲಾಗುತ್ತಿದೆ. ಈಗಾಗಲೇ ಕೆಲವು ಜಿಲ್ಲಾ ಆಸ್ಪತ್ರೆಗಳಿಗೆ CT ಮತ್ತು MRI ಸ್ಕ್ಯಾನ್ ಯಂತ್ರಗಳ ಖರೀದಿಗೆ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. |

ಸಂಖ್ಯೆ: ಆಕುಕ 22 ಎಸ್.ಟಿ.ಕ್ಯೂ 2026

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು